ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 59-64
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ವಿರುದ್ಧ ಬಾಲಗಂಗಾಧರ ತಿಲಕರ ಹೋರಾಟ

**ಸವಿತಾ ಕೆ.ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

***Abstract:***
*ಬಾಲಗಂಗಾಧರ ತಿಲಕರು ಭಾರತದ ಸ್ವಾತಂತ್ರ್ಯ ಹೋರಾಟದ ಆರಂಭಿಕ ಹಂತದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಜನರಲ್ಲಿ ರಾಷ್ಟ್ರೀಯ ಚೇತನವನ್ನು ಮೂಡಿಸಿದ ಪ್ರಮುಖ ನಾಯಕರಾಗಿದ್ದರು. ಬ್ರಿಟಿಷರ ದಮನಕಾರಿ ಆಡಳಿತ, ಆರ್ಥಿಕ ಶೋಷಣೆ ಮತ್ತು ರಾಜಕೀಯ ಅಧಿಪತ್ಯವನ್ನು ಅವರು ತೀವ್ರವಾಗಿ ಖಂಡಿಸಿದರು. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ" ಎಂಬ ಘೋಷಣೆಯ ಮೂಲಕ ಸ್ವಾತಂತ್ರ್ಯದ ಅಗತ್ಯತೆಯನ್ನು ಜನಮನದಲ್ಲಿ ಬಿತ್ತಿದರು. ಗಣೇಶೋತ್ಸವ ಮತ್ತು ಶಿವಾಜಿ ಜಯಂತಿ ಮೊದಲಾದ ಸಾರ್ವಜನಿಕ ಉತ್ಸವಗಳನ್ನು ರಾಷ್ಟ್ರೀಯ ಏಕತೆ ಮತ್ತು ಜನಜಾಗೃತಿಯ ಸಾಧನಗಳಾಗಿ ಬಳಸಿದರು. ಅವರ ಪತ್ರಿಕೋದ್ಯಮ, ರಾಜಕೀಯ ಚಳವಳಿಗಳು ಮತ್ತು ಶಿಕ್ಷಣದ ಮೂಲಕ ದೇಶಭಕ್ತಿಯ ಮನೋಭಾವವನ್ನು ಬೆಳೆಸಿದರು. ತಿಲಕರ ಹೋರಾಟವು ಭಾರತೀಯ ರಾಷ್ಟ್ರೀಯ ಚಳವಳಿಗೆ ಹೊಸ ದಿಕ್ಕು ಮತ್ತು ಶಕ್ತಿಯನ್ನು ನೀಡಿದ ಮಹತ್ವದ ಘಟ್ಟವಾಗಿದೆ. ಈ ಲೇಖನವು ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ವಿರುದ್ಧ ತಿಲಕರ ಹೋರಾಟದ ವೈಚಾರಿಕತೆ, ಕಾರ್ಯತಂತ್ರ ಮತ್ತು ಅದರ ಐತಿಹಾಸಿಕ ಮಹತ್ವವನ್ನು ವಿಶ್ಲೇಷಿಸುತ್ತದೆ.*

***Keywords:*** *ಬಾಲಗಂಗಾಧರ ತಿಲಕ, ವಸಾಹತುಶಾಹಿ, ಸಾಮ್ರಾಜ್ಯಶಾಹಿ, ಸ್ವರಾಜ್ಯ ಚಳವಳಿ, ಭಾರತೀಯ ರಾಷ್ಟ್ರೀಯತೆ.*

## ಪೀಠಿಕೆ

19ನೇ ಶತಮಾನವನ್ನು ಜಗತ್ತಿನ ಇತಿಹಾಸದಲ್ಲಿ ರಾಷ್ಟ್ರೀಯತೆಯ ಯುಗ ಎಂದು ಕರೆಯಲಾಗಿದೆ. ಏಕೆಂದರೆ 1789ರಲ್ಲಿ ಸಂಭವಿಸಿದ ಫ್ರಾನ್ಸ್ ಮಹಾಕ್ರಾಂತಿ ಇಡೀ ವಿಶ್ವಕ್ಕೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಪ್ರಜಾಪ್ರಭುತ್ವ, ಗಣರಾಜ್ಯ ತತ್ವಗಳನ್ನು ಪ್ರಚೂರಪಡಿಸಿತು. ಇದರ ಪ್ರಭಾವದಿಂದಾಗಿ ಪಾಶ್ಚಿಮಾತ್ಯ ರಾಷ್ಟ್ರಗಳ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ನೀತಿಗೆ ತುತ್ತಾಗಿದ್ದ ಪೌರಾತ್ಯ ರಾಷ್ಟ್ರಗಳಲ್ಲಿ ಜಾಗೃತಿ ಉಂಟಾಗಿ ಪ್ರತಿಭಟನೆಗಳು ಸಂಭವಿಸಿದವು. ಭಾರತಕ್ಕೆ ವ್ಯಾಪಾರಕ್ಕಾಗಿ ಆಗಮಿಸಿದ ಬ್ರಿಟಿಷರು ಸುಮಾರು ಮೂರು ಶತಮಾನಗಳ ಕಾಲ ಭಾರತವನ್ನು ತಮ್ಮ ವಸಾಹತುವನ್ನಾಗಿ ಮಾಡಿಕೊಂಡು ದಬ್ಬಾಳಿಕೆಯ ಆಡಳಿತ ನಡೆಸಿದರು. ಭಾರತೀಯರಲ್ಲೂ ಸಹ 19ನೇ ಶತಮಾನದಲ್ಲಿ ಬ್ರಿಟಿಷರ ಆಡಳಿತ ನೀತಿ, ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ, ಇಂಗ್ಲಿಷ್ ಶಿಕ್ಷಣದ ಪ್ರಭಾವ, ಸಾರಿಗೆ ಸಂಪರ್ಕದ ಅಭಿವೃದ್ಧಿ, ಭೂ ಸಂಶೋಧನೆಗಳ ಪ್ರಭಾವ ಮೊದಲಾದ ಅಂಶಗಳ ಪ್ರಭಾವದಿಂದ ರಾಷ್ಟ್ರೀಯ ಜಾಗೃತಿ ಉಂಟಾಗಿ ಬ್ರಿಟಿಷ್ ದಬ್ಬಾಳಿಕೆ ಆಡಳಿತದ ವಿರುದ್ಧ ಪ್ರತಿಭಟನೆಗಳು ಸಂಭವಿಸಿದವು. ಅದರಲ್ಲಿ 1857ರಲ್ಲಿ ಸಂಭವಿಸಿದ 'ಪ್ರಥಮ ಸ್ವಾತಂತ್ರ್ಯ ಚಳವಳಿ' ಅಥವಾ 'ಸಿಪಾಯಿ ದಂಗೆ'

***Please cite this article as:*** ಸವಿತಾ, ಕೆ.ಎಸ್. (2026). ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ವಿರುದ್ಧ ಬಾಲಗಂಗಾಧರ ತಿಲಕರ ಹೋರಾಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 59–64

ಪ್ರಮುಖವಾದದ್ದು. ಇಂತಹ ಸಂದಿಗ್ಧ ಪರಿಸ್ಥಿಯಲ್ಲಿ ಭಾರತೀಯರು ಮತ್ತು ಬ್ರಿಟಿಷರ ನಡುವೆ ಸೌಹರ್ದತೆಯನ್ನು ಏರ್ಪಡಿಸುವ ಉದ್ದೇಶದಿಂದ ಬ್ರಿಟಿಷ್ ನಿವೃತ್ತ ಅಧಿಕಾರಿ ಎ.ಒ.ಹ್ಯೂಮ್ ಭಾರತ ರಾಷ್ಟ್ರೀಯ ಕಾಂಗ್ರೆಸ್ ರಚನೆಗೆ ಪ್ರೋತ್ಸಾಹಿಸಿದರು. ಇದರ ಪ್ರತಿಫಲವಾಗಿ 1885ರಲ್ಲಿ ಎ.ಒ.ಹ್ಯೂಮ್‌ರ ಮಾರ್ಗದರ್ಶನದಲ್ಲಿ ಡಬ್ಲ್ಯೂ.ಸಿ. ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಅನೇಕ ಭಾರತೀಯ ನಾಯಕರ ನೇತೃತ್ವದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಯಿತು. ಇದರ ಮೂಲಕ ಭಾರತೀಯರು ರಾಷ್ಟ್ರೀಯ ಚಳುವಳಿಯನ್ನು ಆರಂಭಿಸಿದರು. ಇದನ್ನು ಅಧ್ಯಯನ ದೃಷ್ಟಿಯಿಂದ ಮಂದಗಾಮಿಗಳ ಯುಗ, ತೀವ್ರಗಾಮಿಗಳ ಯುಗ ಮತ್ತು ಗಾಂಧಿ ಯುಗ ಎಂದು ವಿಂಗಡಿಸಲಾಗಿದೆ. ಇದರಲ್ಲಿ ತೀವ್ರಗಾಮಿಗಳಾಗಿ ಬಾಲಗಂಗಾಧರ ತಿಲಕರ ಪಾತ್ರ ಅಗ್ರಗಣ್ಯವಾದುದು.

**ತಿಲಕರ ಜೀವನ**

ಬಾಲಗಂಗಾಧರ ತಿಲಕರು 1857 ಜೂನ್ 23 ರಂದು ಮಹಾರಾಷ್ಟ್ರದ ರತ್ನಗಿರಿಯಲ್ಲಿ ಗಂಗಾಧರಪಂತ್ ಮತ್ತು ಪಾರ್ವತಿಬಾಯಿ ಎಂಬ ಬ್ರಾಹ್ಮಣ ದಂಪತಿಗಳ ಪುತ್ರರಾಗಿ ಜನಿಸಿದರು. ಇವರು ರತ್ನಗಿರಿಯ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದು ನಂತರ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನು ಪಡೆದು 1876ರಲ್ಲಿ ಬಿ.ಎ. ಪದವಿಯನ್ನು ಪಡೆದರು. ನಂತರ 1879ರಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿಯನ್ನು ಪಡೆದರು. ಇವರು ಬಾಲಕರಾಗಿದ್ದಾಗಿನಿಂದಲೇ ಸಹಪಾಠಿಗಳೊಂದಿಗೆ ದೇಶದ ಪರಿಸ್ಥಿತಿಯನ್ನು ಕುರಿತು ಚಿಂತಿಸುತ್ತಿದ್ದರು. ತಿಲಕರು ಉನ್ನತ ಶಿಕ್ಷಣವನ್ನು ಪಡೆದು ನಂತರ ಸರ್ಕಾರಿ ನೌಕರಿಯನ್ನು ಬಯಸದೆ ದೇಶವನ್ನು ಬ್ರಿಟಿಷರ ಬಂಧನದಿಂದ ಬಿಡಿಸಲು, ದೇಶ ಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳುವ ನಿರ್ಧಾರ ಮಾಡಿದರು.

**ಶೈಕ್ಷಣಿಕ ರಂಗದಲ್ಲಿ ತಿಲಕ್**

ತಿಲಕರು ಶಿಕ್ಷಣದ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು ಸುಲಭವೆಂದು ಭಾವಿಸಿ ತಮ್ಮ ಸ್ನೇಹಿತ ಅಗರ್‌ಕರ ಜೊತೆ ಸೇರಿ 1880 ಜನವರಿ 2 ರಂದು ಪುಣೆಯಲ್ಲಿ "ನ್ಯೂ ಇಂಗ್ಲಿಷ್" ಶಾಲೆಯನ್ನು ಪ್ರಾರಂಭಿಸಿದರು. ಇದರಿಂದ ಶೈಕ್ಷಣಿಕ ಕ್ರಾಂತಿ ಮಹಾರಾಷ್ಟ್ರದಲ್ಲಿ ಪ್ರಾರಂಭವಾಯಿತು. ಈ ಶಾಲೆ 35 ವಿದ್ಯಾರ್ಥಿಗಳಿಂದ ಆರಂಭವಾಗಿ 2ನೇ ವರ್ಷದಲ್ಲಿ 336 ವಿದ್ಯಾರ್ಥಿಗಳಿದ್ದ ಸಂಖ್ಯೆ 1884ರಲ್ಲಿ 1000ಕ್ಕೆ ಏರಿತು. 1885 ಜನವರಿ 2 ರಂದು ಮುಂಬೈ ಗೌವರ್ನರ್ ಸರ್ ಜೇಮ್ಸ್ ಫರ್ಗ್ಯುಷನ್ ಕಾಲೇಜನ್ನು ಸ್ಥಾಪಿಸಿದರು. ಈ ಕಾಲೇಜಿನಲ್ಲಿ ತಿಲಕರು ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ವಿದ್ಯಾರ್ಥಿಗಳ ಮೆಚ್ಚುಗೆ ಪಡೆದರು.

**ಪತ್ರಿಕೋದ್ಯಮಿಯಾಗಿ ತಿಲಕ್**

ಜನಜಾಗೃತಿಯಲ್ಲಿ ವೃತ್ತ ಪತ್ರಿಕೆಗಳು ಶಿಕ್ಷಣದಂತೆ ಪ್ರಮುಖ ಪಾತ್ರವಹಿಸುತ್ತವೆಂದು ಅರಿತ ತಿಲಕರು "ದಿ ಮರಾಠಿ ಮತ್ತು ಕೇಸರಿ" ಎಂಬ ವಾರಪತ್ರಿಕೆಗಳನ್ನು ಆರಂಭಿಸಿದರು. ದಿ ಮರಾಠಿ ಎಂಬುದು ಇಂಗ್ಲಿಷ್ ವಾರಪತ್ರಿಕೆಯಾಗಿದ್ದು, ಕೇಸರಿ ಮರಾಠಿ ಭಾಷೆಯ ದಿನ ಪತ್ರಿಕೆಯಾಗಿ ಪ್ರಕಟಗೊಂಡವು. ಈ ಪತ್ರಿಕೆಗಳ ಮೂಲಕ ಜನರೊಂದಿಗೆ ಸಂಪರ್ಕ ಸ್ಥಾಪಿಸುವುದು ಸಾಧ್ಯವಾಯಿತು.

**ಸಮಾಜ ಸುಧಾರಕರಾಗಿ ತಿಲಕ್**

ತಿಲಕರು ತೀವ್ರವಾದಿ ರಾಜಕಾರಣಿಯಾಗಿದ್ದಂತೆ ಸಮಾಜದ ಅನಿಷ್ಟ ಪದ್ಧತಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಮಾಜ ಸುಧಾರಕರು ಆಗಿದ್ದರು. ಇವರು ಬಾಲ್ಯ ವಿವಾಹವನ್ನು ವಿರೋಧಿಸಿ ಹೆಣ್ಣು ಮಕ್ಕಳಿಗೆ 16 ವರ್ಷ ತುಂಬಿದ ನಂತರ ಗಂಡು ಮಕ್ಕಳಿಗೆ 20 ವರ್ಷ ತುಂಬಿದ ಮೇಲೆ ಮದುವೆ ಆಗಬೇಕೆಂದು, ಪುರುಷರು 40 ವರ್ಷದ ಬಳಿಕ ವಿವಾಹವಾಗಬಾರದೆಂದು ವಿರೋಧಿಸಿದರು. ಅಲ್ಲದೆ ಜಾತಿ ಪದ್ಧತಿ, ವರದಕ್ಷಿಣೆಯ ಪಿಡುಗು ಮೊದಲಾದ ಸಾಮಾಜಿಕ ಅನಿಷ್ಟಗಳನ್ನು ಖಂಡಿಸಿದರು. ತಿಲಕರು

"ದೇವರು ಅಸ್ಪೃಶ್ಯತೆಯನ್ನು ಸಹಿಸಿಕೊಳ್ಳುವುದಾದರೆ ನಾನು ದೇವರ ಅಸ್ತಿತ್ವವನ್ನೇ ನಂಬುವುದಿಲ್ಲ" ಎಂದು ಸಾರಿದರು.

1896–97ರಲ್ಲಿ ಮಹಾರಾಷ್ಟ್ರದಲ್ಲಿ ಭೀಕರ ಕ್ಷಾಮ ಮತ್ತು ಭಯಂಕರ ಪ್ಲೇಗು ರೋಗ ಕಾಣಿಸಿಕೊಂಡಾಗ ತಿಲಕರು ಜನತೆಗೆ ಕಂದಾಯವನ್ನು "ಪಾವತಿ ಮಾಡಬೇಡಿ" ಎಂದು ಕರೆ ನೀಡಿ 'ಕರ ನಿರಾಕರಣ ಚಳವಳಿ'ಯನ್ನು ಆರಂಭಿಸಿದರು. ಕೇಸರಿ ಪತ್ರಿಕೆಯಲ್ಲಿ ಬರ ಪರಿಹಾರ ಕುರಿತು ಬರೆಯುತ್ತ "ಹೇಡಿಗಳಾಗಬೇಡಿ, ಆಸ್ತಿ ಮತ್ತು ಜಾನುವಾರುಗಳನ್ನು ಮಾರಿ ಕಂದಾಯವನ್ನು ನೀಡಬೇಡಿ" ಎಂದು ಕರೆ ನೀಡಿದರು. ತಿಲಕರು ಪೂನಾದ ಸುತ್ತಮುತ್ತ ಪ್ಲೇಗು ರೋಗ ಕಾಣಿಸಿಕೊಂಡಾಗ ಇತರ ನಾಯಕರಂತೆ ಪೂನಾದಿಂದ ವಲಸೆ ಹೋಗದೆ, ಅಲ್ಲಿಯೇ ನೆಲೆಸಿ ಜನರಿಗೆ ಸಾಧ್ಯವಾದ ಎಲ್ಲಾ ನೆರವನ್ನು ಒದಗಿಸಿದರು. ಅಲ್ಲದೆ ಸರ್ಕಾರಿ ಅಧಿಕಾರಿಗಳ ಅಮಾನವೀಯ ಕ್ರೂರ ಕ್ರಮಗಳನ್ನು ಕಟುವಾಗಿ ಟೀಕಿಸಿದರು. ಇದರಿಂದ ತಿಲಕರು ಜನರಿಗೆ ಮತ್ತಷ್ಟು ಹತ್ತಿರವಾದರು.

**ಜನಸಂಘಟನೆಯಲ್ಲಿ ತಿಲಕರ ಮಾರ್ಗ**

ಭಾರತದಿಂದ ಬ್ರಿಟಿಷರನ್ನು ಓಡಿಸಿ ಸ್ವರಾಜ್ಯವನ್ನು ಪಡೆಯಲು ಜನತಾ ಆಂದೋಲನವನ್ನು ಆರಂಭಿಸಿದ ತಿಲಕರು ಸಾಮಾನ್ಯ ಜನತೆಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಲು, ರಾಷ್ಟ್ರೀಯ ಆದರ್ಶಗಳನ್ನು ಪ್ರಚಾರ ಮಾಡಲು, ಯುವಕರು ತಾಯಿನಾಡಿಗಾಗಿ ಹೋರಾಡುವಂತೆ ಮಾಡಲು ಗಣೇಶ ಉತ್ಸವ ಮತ್ತು ಶಿವಾಜಿ ಉತ್ಸವಗಳನ್ನು ಜಾರಿಗೆ ತಂದರು. ಭಾಷಣಗಳು, ದೇಶ ಭಕ್ತಿಗೀತೆಗಳು, ವಿಚಾರ ಪೂರಿತ ಲೇಖನಗಳ ಮೂಲಕ ಜನರಲ್ಲಿ ರಾಷ್ಟ್ರೀಯ ಪ್ರೇಮವನ್ನು ಬೆಳೆಸಲು ತಿಲಕರು ಪ್ರಯತ್ನ ಮಾಡಿದರು. ಇವರು ಆರಂಭಿಸಿದ ಉತ್ಸವಗಳು ಮಹಾರಾಷ್ಟ್ರಾದ್ಯಂತ ಆರಂಭವಾಗಿ ನಂತರ ಮದ್ರಾಸ್, ಕಲ್ಕತ್ತಾ, ಬನಾರಸ್, ಕರಾಚಿಗಳಿಗೂ ಪ್ರಕ್ಷೇಪಣಗೊಂಡಿತು. ತಿಲಕರು ಸ್ವರಾಜ್ಯದ ಬಗ್ಗೆ ಮಾತನಾಡುತ್ತಾ "ಸ್ವರಾಜ್ಯ ನನ್ನ ಆಜನ್ಮ ಸಿದ್ಧ ಹಕ್ಕು, ಅದನ್ನು ಪಡೆದೆ ತೀರುತ್ತೇನೆ" ಎಂದು ಘೋಷಿಸಿದರು. ಸ್ವರಾಜ್ಯವಿಲ್ಲದೇ ಸಮಾಜ ಸುಧಾರಣೆ, ಕೈಗಾರಿಕಾ ಪ್ರಗತಿ ಮತ್ತು ಉಪಯುಕ್ತ ಶಿಕ್ಷಣ ಸಾಧ್ಯವಿಲ್ಲವೆಂದು ತಿಳಿಸಿದ ತಿಲಕರು ಸ್ವರಾಜ್ಯವನ್ನು ಪಡೆಯಲು ಬಹಿಷ್ಕಾರ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣ, ಪ್ರತಿರೋಧ ಕಾರ್ಯಕ್ರಮಗಳು ಪ್ರಮುಖವೆಂದು ಸಾರಿದರು. ಇವರ ಸ್ವರಾಜ್ಯ ಕಲ್ಪನೆಯ ಬಗ್ಗೆ "ಆರ್.ಸಿ. ಮಜುಂಮ್ದಾರ್"ರವರು ತಿಲಕರು ಭಾರತದಲ್ಲಿ ರಾಜಕೀಯ ತತ್ತ್ವಜ್ಞಾನವನ್ನು ಕಾಂಗ್ರೆಸ್ ಸಮ್ಮೇಳನಗಳ ಮಂಟಪದಿಂದ ರಸ್ತೆಗೂ, ಬಜಾರಿಗೂ ತಂದಿಳಿಸಿದರು" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

**ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ತಿಲಕರ ಪಾತ್ರ**

ಬ್ರಿಟಿಷರ ಆಳ್ವಿಕೆಯಿಂದ ಭಾರತೀಯರನ್ನು ಮುಕ್ತಿಗೊಳಿಸಲು ಆಂದೋಲನ ಮತ್ತು ಸಂಘಟನೆ ಅನಿವಾರ್ಯವೆಂದು ಭಾವಿಸಿದ ತಿಲಕರು 1889ರಲ್ಲಿ ವಿಲಿಯಂ ವೆಡ್ಡರ್ನ್‌ಬರ್ನ್ ಅಧ್ಯಕ್ಷತೆಯಲ್ಲಿ ಮುಂಬೈನಲ್ಲಿ ಜರುಗಿದ ಐದನೆಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಪ್ರಥಮ ಬಾರಿಗೆ ಪಾಲ್ಗೊಂಡರು. ತಿಲಕರು ರಾಷ್ಟ್ರೀಯ ಕಾಂಗ್ರೆಸ್ಸಿನ ಚಳುವಳಿಯಲ್ಲಿ ಜನಸಾಮಾನ್ಯರು ಪಾಲ್ಗೊಳ್ಳುವಂತೆ ಮಾಡಿ, ಅವರು ಸಹ ಕಾಂಗ್ರೆಸ್ಸಿಗೆ ವಂತಿಕೆ ನೀಡುವಂತೆ ಮಾಡಿ ಗ್ರಾಮಮಟ್ಟದ ವೇದಿಕೆಗಳನ್ನು ನಿರ್ಮಿಸಿದರು. ರೈತರನ್ನು ನಿರ್ಲಕ್ಷಿಸಿದ ಕಾಂಗ್ರೆಸ್ ನಾಯಕರನ್ನು ಕಟುವಾಗಿ ಟೀಕಿಸಿದರು. ಕಾಂಗ್ರೆಸ್ಸನ್ನು "ಹೊಗಳು ಭಟ್ಟರ ಕಾಂಗ್ರೆಸ್" ಎಂದು ಟೀಕಿಸಿ, "ಕಪ್ಪೆಗಳಂತೆ ವರ್ಷಕ್ಕೆ ಒಮ್ಮೆ ವಟಗುಟ್ಟಿದರೆ ನಾವೇನೂ ಸಾಧಿಸಲಾರವು" ಎಂದು ಗುಡುಗಿದರು. ಮಂದಗಾಮಿಗಳ ಭಿಕ್ಷೆ ಬೇಡುವ ರಾಜಕೀಯ ನೀತಿಯನ್ನು ಖಂಡಿಸಿದರು. ಮಂದಗಾಮಿಗಳ ನಾಯಕರಾಗಿದ್ದ ಗೋಪಾಲ ಕೃಷ್ಣ ಗೋಖಲೆರವರನ್ನು "ಬೆನ್ನು ಮೂಳೆ ಇಲ್ಲದ ಮನುಷ್ಯ" ಎಂಬುದಾಗಿ ಟೀಕಿಸಿದರು. ಭಾರತದ ಪೀನಲ್‌ಕೋಡ್ ಇರಬೇಕು

ಎಂದು ತಿಲಕ ಗೇಲಿ ಮಾಡಿದರು. "ರಾಜಕೀಯ ಹಕ್ಕುಗಳು ಬೇಡಿದರೆ ಬರುವುದಿಲ್ಲ. ಅದಕ್ಕಾಗಿ ಹೋರಾಡಬೇಕು ಹಿಂಸೆ, ಬಲಪ್ರಯೋಗ ಮಾಡಬೇಕು" ಎಂದರು.

**ತೀವ್ರವಾದಿಯಾಗಿ ತಿಲಕ್**

1905ರಲ್ಲಿ ಬಂಗಾಳವನ್ನು ವಿಭಜಿಸಿದ ಲಾರ್ಡ್ ಕರ್ಜನ್ ಕ್ರಮವನ್ನು ತೀವ್ರವಾಗಿ ಟೀಕಿಸಿ, ಬಂಗಾಳ ವಿಭಜನೆ ವಿರೋಧಿ ಚಳುವಳಿಯನ್ನು ಬೆಂಬಲಿಸಿದರಲ್ಲದೇ ಅದರ ಅಂಗವಾಗಿ ಹಮ್ಮಿಕೊಳ್ಳಲಾದ ಸ್ವದೇಶಿ ಮತ್ತು ಬಹಿಷ್ಕಾರ ಚಳುವಳಿಯನ್ನು ರಾಷ್ಟ್ರಾದ್ಯಂತ ವಿಸ್ತರಿಸಬೇಕೆಂದು ಒತ್ತಾಯಿಸಿದರು. ತಿಲಕರ ಈ ಸಿದ್ಧಾಂತವನ್ನು ಮಂದಗಾಮಿಗಳು ಒಪ್ಪಿಕೊಳ್ಳಲಿಲ್ಲ. "ಎಲ್ಲಿಯವರೆಗೆ ನಾವು ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿ ಸಾಮಾರ್ಥ್ಯವನ್ನು ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಸರ್ಕಾರದ ದಬ್ಬಾಳಿಕೆ ಮುಂದುವರಿಯುತ್ತದೆ" ಎಂದು ತಿಲಕರು ಎಚ್ಚರಿಸಿದರು. ತಿಲಕರ ಈ ಘೋಷಣೆಗಳನ್ನು ಮಂದಗಾಮಿಗಳು ವಿರೋಧಿಸಿದ್ದರಿಂದ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಒಡಕನ್ನು ನಿವಾರಿಸಲು ದಾದಾಬಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾದಲ್ಲಿ 1906ರಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸಲಾಯಿತು. ದಾದಾಬಾಯಿ ನವರೋಜಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಸ್ವರಾಜ್ಯ ಪಡೆಯುವುದೇ ಕಾಂಗ್ರೆಸ್ಸಿನ ಗುರಿ" ಎಂದು ಘೋಷಿಸಿದರು. ಇದರಿಂದ ತೀವ್ರಗಾಮಿಗಳ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಯಿತು.

1907ರಲ್ಲಿ ಸೂರತ್‌ನಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ 2 ಗುಂಪುಗಳ ನಡುವೆ ಅಧ್ಯಕ್ಷರ ಆಯ್ಕೆ ಮತ್ತು ಸಿದ್ಧಾಂತ ಮತ್ತಿತರ ವಿಷಯಗಳಲ್ಲಿ ಘರ್ಷಣೆ ಏರ್ಪಟ್ಟು ಕಾಂಗ್ರೆಸ್ ಇಬ್ಭಾಗವಾಯಿತು. ಇದನ್ನು ಇತಿಹಾಸ ಪ್ರಸಿದ್ಧವಾದ "ಸೂರತ್ ವಿಭಜನೆ" ಎನ್ನಲಾಯಿತು. ಇದರಿಂದ ತಿಲಕರಿಗೆ ನಿರಾಸೆ ಮತ್ತು ಆಘಾತ ಉಂಟಾಗಿ ಅವರು "ಕಾಂಗ್ರೆಸ್ ವಿಭಜನೆ ಮಹಾ ವಿಪತ್ತು" ಎಂದು ಭಾವಿಸಿದರು. ಈ ಘಟನೆಯಿಂದ ತಿಲಕರು ಮತ್ತು ಅವರ ಅನುಯಾಯಿಗಳು ತೀವ್ರಗಾಮಿಗಳಾದರು.

**ಬಂಗಾಳ ವಿಭಜನೆಯ ವಿರುದ್ಧ ಸ್ವದೇಶಿ ಮತ್ತು ಬಹಿಷ್ಕಾರ ಚಳುವಳಿಯಲ್ಲಿ ತಿಲಕ**

1905ರಲ್ಲಿ ಬಂಗಾಳವನ್ನು ವಿಭಜಿಸಿದ ಲಾರ್ಡ್ ಕರ್ಜನ್‌ನ ಕ್ರಮವನ್ನು ತೀವ್ರವಾಗಿ ವಿರೋಧಿಸಿ ಇದು ಬ್ರಿಟಿಷರು ಹಿಂದೂ ಮುಸ್ಲಿಮರನ್ನು ಪ್ರತ್ಯೇಕಿಸಿ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಟೀಕಿಸಿದರು. ಬಂಗಾಳ ವಿಭಜನೆ ಕೇವಲ ಪ್ರಾಂತೀಯ ವಿಷಯವಲ್ಲ, "ಇದು ದೇಶದ ಜನತೆಯ ಆತ್ಮಾಭಿಮಾನ ಮತ್ತು ಘನತೆಯ ಮೇಲಿನ ದಾಳಿ" ಎಂದು ಜನರಲ್ಲಿ ಪ್ರಚಾರ ಮಾಡಿದರು. ತಿಲಕರು ಬಂಗಾಳ ವಿಭಜನೆಯನ್ನು ವಿರೋಧಿಸಿ ಸ್ವದೇಶಿ ಚಳುವಳಿಯನ್ನು ಪೂನಾ ಮತ್ತು ಮುಂಬೈಯಲ್ಲಿ ಸಂಘಟಿಸಿದರು. ವಿದೇಶಿ ವಸ್ತುಗಳಿಗೆ ಬದಲಾಗಿ ಸ್ವದೇಶಿ ವಸ್ತುಗಳನ್ನು ಕೊಂಡುಕೊಳ್ಳಲು ಜನರಿಗೆ ಕರೆ ನೀಡಿದರು.

ಬ್ರಿಟನ್‌ನಿಂದ ಬಂದ ವಸ್ತುಗಳಿಗೆ ರಾಷ್ಟ್ರೀಯ ಬಹಿಷ್ಕಾರ ಒಂದೇ ಮಾನದಂಡ ಎಂದರು. ಅಲ್ಲದೇ "ನಮ್ಮ ರಾಷ್ಟ್ರವು ಒಂದು ಮರವಿದ್ದಂತೆ, ಅದರ ಕಾಂಡ ಸ್ವರಾಜ್ಯವಿದ್ದಂತೆ, ಕೊಂಬೆಗಳೆ ಸ್ವದೇಶಿ ಮತ್ತು ವಿದೇಶಿ ವಸ್ತು ಬಹಿಷ್ಕಾರ ಚಳುವಳಿಗಳು" ಎಂದು ನುಡಿದರು. ಜನರಿಂದ ಹಣ ಸಂಗ್ರಹಿಸಿ ಸ್ವದೇಶಿ ಸಹಕಾರ ಸಂಘಗಳನ್ನು ಸ್ಥಾಪಿಸಿದರು. ವ್ಯಾಪಾರ ಶುರು ಮಾಡಲು ಜನರಿಂದ "ಪೈಸಾ ಚಂದಾ" ಸಂಗ್ರಹಿಸಿ ಪೂನಾ ನಗರದಲ್ಲಿ ಸ್ವದೇಶಿ ಗಾಜು ಕಾರ್ಖಾನೆ ಕಟ್ಟಿಸಿದರು. ತಿಲಕ್ ಸ್ವದೇಶಿ ವಸ್ತುಗಳ ಪ್ರದರ್ಶನ ಹಾಗೂ ಮಾರಾಟವನ್ನು ತಮ್ಮ ಮನೆಯಲ್ಲಿಯೇ ಏರ್ಪಡಿಸಿದ್ದರು. ಮುಂಬಾಯಿಯ ಬಟ್ಟೆ ಕಾರ್ಖಾನೆಯ ಮಾಲೀಕರು ಧೋತಿಗಳನ್ನು ಸಾಧಾರಣ ಬೆಲೆಗೆ ಮಾರಾಟ ಮಾಡುವಂತೆ ಕೇಳಿಕೊಂಡರು. ಅನೇಕ ವಿದೇಶಿ ವಸ್ತುಗಳ

ಮಳಿಗೆಗಳು ಮುಚ್ಚಿ ಹೋಗುವಂತೆ ಮಾಡಿದರು. ತಿಲಕ್ ಮಹಾರಾಷ್ಟ್ರದ ದುರೀಣ ಮಾತ್ರರಲ್ಲದೇ ಇಡೀ ಭಾರತದ ದುರೀಣರಾದರು.

**ಸೆರೆಮನೆಯಲ್ಲಿ ತಿಲಕ್**

ಬ್ರಿಟಿಷರ ದಾಸ್ಯ ಸಂಕೋಲೆಯಿಂದ ಮಾತೃಭೂಮಿಯನ್ನು ಬಿಡುಗಡೆ ಮಾಡುವುದಕ್ಕಾಗಿ ಹಾಗೂ ಸ್ವಾತಂತ್ರ್ಯಕ್ಕಾಗಿ ಸೆರೆಮನೆವಾಸದ ರುಚಿಯನ್ನು ಅನುಭವಿಸಿದ ಪ್ರಥಮ ರಾಷ್ಟ್ರನಾಯಕರೆಂದರೆ ತಿಲಕ್. ತಿಲಕ್ ಒಟ್ಟು ಮೂರು ಬಾರಿ ಸೆರೆವಾಸವನ್ನು ಅನುಭವಿಸಿದರು.

ಕ್ರಿ.ಶ. 1882ರಲ್ಲಿ ತಿಲಕ್ ಮತ್ತು ಅಗರಕರ್ ಕೊಲ್ಲಾಪುರದ ಸಂಸ್ಥಾನಕ್ಕೆ ಸಂಬಂಧಿಸಿದಂತೆ ತಮ್ಮ ಪತ್ರಿಕೆಗಳಾದ ಮರಾಠಿ ಮತ್ತು ಕೇಸರಿಯಲ್ಲಿ ಕೊಲ್ಲಾಪುರದ ರಾಜ ಎರಡನೇ ಶಿವಾಜಿ ಹುಚ್ಚನೆಂದು ಘೋಷಿಸಿ ಆತನ ಪದಚ್ಯುತಿಗೆ ಪಿತೂರಿ ನಡೆಸಲಾಗುತ್ತಿದೆ ಎಂದು ಪ್ರಕಟಿಸಿದ ಫಲ ತಿಲಕ್ ಮತ್ತು ಅಗರ್‌ಕರ್ 4 ತಿಂಗಳ ಕಾಲ ಬೊಂಬಾಯಿಯ ಡೋಂಗ್ರಿ ಜೈಲಿನಲ್ಲಿರಬೇಕಾಯಿತು

ಕ್ರಿ.ಶ 1897ರಲ್ಲಿ ಪೂನಾ ಮತ್ತಿತರ ಕಡೆ ಪ್ಲೇಗ್ ಕಾಣಿಸಿಕೊಂಡಾಗ ಅದನ್ನು ತಡೆಯಲು ಸರ್ಕಾರ ರ‍್ಯಾಂಡ್ ಎನ್ನುವ ಅಧಿಕಾರಿಯನ್ನು ನೇಮಿಸಿತು. ಈತ ಮನೆ ಮನೆಯನ್ನು ಶೋಧಿಸಬೇಕು. ಪ್ಲೇಗ್ ಇದೆ ಎಂದು ಮನೆಯನ್ನು ಖಾಲಿ ಮಾಡಬೇಕು. ಮನೆಯಲ್ಲಿದ್ದ ವಸ್ತುಗಳನ್ನು ಸುಡಬೇಕು ಎಂದು ಸೈನಿಕರಿಗೆ ಆಜ್ಞೆ ಹೊರಡಿಸಿದ್ದರು. ರ‍್ಯಾಂಡ್‌ನ ಈ ಉದ್ಧಟತನದ ನೀತಿಯನ್ನು ಟೀಕಿಸಿ "ಸರ್ಕಾರಕ್ಕೆ ತಲೆ ಕೆಟ್ಟಿದೆಯೇ" ಎನ್ನುವ ಲೇಖನವನ್ನು, ಕ್ರಿ.ಶ.1897ರ ಮೇ ತಿಂಗಳ ಕೇಸರಿ ಪತ್ರಿಕೆಯಲ್ಲಿ ಪ್ರಕಟಿಸಿದರು. ಆದರೆ ಆಂಗ್ಲೋ ಇಂಡಿಯನ್ ಪ್ರೆಸ್ ತಿಲಕರ ಲೇಖನವನ್ನು ಖಂಡಿಸಿ, ತಿಲಕರೆ ಸಾರ್ವಜನಿಕ ಅಶಾಂತಿಗೆ ಕಾರಣವೆಂದು ಟೀಕಿಸಿತು. ಇದರಿಂದ ಕ್ರಿ.ಶ.1897ರ ಜೂನ್ 12ರಂದು ತಿಲಕರನ್ನು ಬಂಧಿಸಲಾಯಿತು.

ಬಂಗಾಳದ ವಿಭಜನಾ ವಿರೋಧಿ ಚಳುವಳಿಯಲ್ಲಿ, ಕ್ರಿ.ಶ.1908ರ ಜೂನ್ 24 ರಂದು ತಿಲಕರವರನ್ನು ಮುಂಬಯಿಯ ಸರ್ದಾರ್ ಗೃಹದಲ್ಲಿ ಬಂಧಿಸಿ ಮೊದಲು ಗುಜರಾತಿನ 'ಸಬರಮತಿ' ಜೈಲಿಗೆ ಕಳುಹಿಸಲಾಯಿತು. ನಂತರ ಮುಂದಿನ ತೀರ್ಪಿನ ಬಳಿಕ ತಿಲಕರವರನ್ನು ಬಂಧಿಸಿ ಗಡಿಪಾರು ಮಾಡಿ ಬರ್ಮಾದ ಮಾಂಡಲೆ ಕಾರಗೃಹಕ್ಕೆ ಕಳುಹಿಸಲಾಯಿತು. ಈ ನಡುವೆ ಕ್ರಿ.ಶ 1912ರಲ್ಲಿ ತಿಲಕರ ಮಡದಿ ಸತ್ಯಭಾಮ ತೀರಿಕೊಂಡರು. ತಿಲಕರಿಗೆ ಅತೀವ ದುಃಖವಾಯಿತು. ಅಂತೂ ಇಂತೂ ಸೆರೆಮನೆ ವಾಸ ಮುಗಿದು ಕ್ರಿ.ಶ.1914ರಲ್ಲಿ ತಿಲಕರಿಗೆ ಬಿಡುಗಡೆಗೆ ಆದೇಶ ಬಂತು. ಆರು ವರ್ಷಗಳ ಕಾಲ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದ ನಂತರ ತಿಲಕರವರನ್ನು, ಕ್ರಿ.ಶ.1914ರ ಜೂನ್ ತಿಂಗಳಲ್ಲಿ ಬಿಡುಗಡೆ ಮಾಡಲಾಯಿತು. ಒಟ್ಟಿನಲ್ಲಿ ತಿಲಕರ ಬಿಡುಗಡೆಯಿಂದ ಭಾರತೀಯ ರಾಷ್ಟ್ರೀಯ ಹೋರಾಟಗಾರರಿಗೆ ಸ್ಪೂರ್ತಿ ಬಂದಂತಾಯಿತು.

**ಲಕ್ನೋ ಅಧಿವೇಶನದಲ್ಲಿ ತಿಲಕ್**

ತಿಲಕರು 1916ರಲ್ಲಿ ಕಾಂಗ್ರೆಸ್ಸಿನ 2 ಬಣಗಳು ಒಂದಾದಾಗ ಅದರ ನಾಯಕರಾದರು. ಈ ಸನ್ನಿವೇಶದಲ್ಲಿ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ಸಿನ ನಡುವೆ ಹೊಂದಾಣಿಕೆಯನ್ನು ಏರ್ಪಡಿಸಲು ಅನಿಬೇಸೆಂಟ್, ಮೊಹಮ್ಮದ್ ಅಲಿ ಜಿನ್ನಾರವರ ಜೊತೆಗೂಡಿ ಲಕ್ನೋ ಅಧಿವೇಶನದಲ್ಲಿ ಲಕ್ನೋ ಒಪ್ಪಂದ ಮಾಡಿಕೊಂಡರು. ಹಿಂದೂ–ಮುಸ್ಲಿಮರಲ್ಲಿ ಒಗ್ಗಟ್ಟಾಗಿ ತಾಯ್ನಾಡಿಗಾಗಿ ಹೋರಾಡಬೇಕು, ದೇಶದ ಭವಿಷ್ಯ ಹಿಂದೂ ಮುಸ್ಲಿಂ ಒಗ್ಗಟ್ಟಿನಲ್ಲಿದೆ ಎಂದು ಸಾರಿದರು. ಈ ಒಪ್ಪಂದದಲ್ಲಿ ಮುಸ್ಲಿಂರ ಬೆಂಬಲ ಪಡೆಯಲು ಮತ ಕ್ಷೇತ್ರದಲ್ಲಿ ಹೆಚ್ಚಿನ ಪ್ರಾತಿನಿಧ್ಯವನ್ನು ನೀಡಿದರು. "ಹಿಂದುಗಳಾದ ನಾವು ಮುಸ್ಲಿಂ ಸಹೋದರಿಗೆ ಎಷ್ಟು ಬಿಟ್ಟುಕೊಟ್ಟರೂ ಹೆಚ್ಚಲ್ಲ" ಎಂದರು.

**ಹೋಮ್ರೂಲ್ ಲೀಗ್ ಚಳುವಳಿಯಲ್ಲಿ ತಿಲಕ್**

ಮೊದಲನೆ ಮಹಾಯುದ್ಧದ ಸನ್ನಿವೇಶದಲ್ಲಿ ಸೆರೆಮನೆಯಿಂದ ಬಿಡುಗಡೆಗೊಂಡ ತಿಲಕರು ಮತ್ತು ಅನಿಬೇಸೆಂಟರು ಬ್ರಿಟಿಷರ ವಸಾಹತುಶಾಹಿ ಆಡಳಿತದ ವಿರುದ್ಧ ಹೋಮ್ ರೂಲ್ ಲೀಗ್ ಚಳುವಳಿಯನ್ನು ಆರಂಭಿಸಿದರು. ತಿಲಕರ ಪ್ರಕಾರ ಹೋಮ್ ರೂಲ್ ಎಂದರೆ ಇಂಗ್ಲೆಂಡಿನಲ್ಲಿ ಅಲ್ಲಿಯ ಪ್ರಜೆಗಳು ಯಾವ ಹಕ್ಕುಗಳಿಗೆ ಅರ್ಹರಾಗಿರುತ್ತಾರೋ ಅದೇ ರೀತಿ ಭಾರತದಲ್ಲಿ ಭಾರತೀಯರು ಅರ್ಹರಾಗಿಬೇಕು. ಹೋಮ್ ರೂಲ್ ಚಳವಳಿಯ ಉದ್ದೇಶ ಸ್ವಯಂ ಆಡಳಿತವನ್ನು ಗಳಿಸುವುದಾಗಿತ್ತು. ತಿಲಕರು ಮುಂಬೈ ಮತ್ತು ಕರ್ನಾಟಕ ಪ್ರಾಂತ್ಯಗಳಲ್ಲಿ ಹೋಮ್ರೂಲ್ ಲೀಗ್ ಶಾಖೆಗಳನ್ನು ಸ್ಥಾಪಿಸಿ, ದೇಶಾದ್ಯಂತ ಪ್ರವಾಸ ಕೈಗೊಂಡು ಚಳುವಳಿಯ ಉದ್ದೇಶ ಮತ್ತು ಕಾರ್ಯಕ್ರಮದ ಬಗ್ಗೆ ಜನರಿಗೆ ಮನವರಿಕೆ ಮಾಡಿದರು. ಇವರ ನೇತೃತ್ವದಲ್ಲಿ ಸುಮಾರು 32 ಸಾವಿರಕ್ಕೂ ಹೆಚ್ಚು ಜನ ಲೀಗ್‌ನ ಸದಸ್ಯರಾಗಿದ್ದರು.

**ಉಪಸಂಹಾರ**

ಬಾಲಗಂಗಾಧರ ತಿಲಕರ ನೇರವಾದ ಮತ್ತು ಸ್ಪಷ್ಟವಾದ ಮಾತುಗಳು, ಭಾಷಣಗಳು, ಅವರ ಪ್ರಾಮಾಣಿಕತೆ ಅವರು ದೇಶಕ್ಕಾಗಿ ನಡೆಸಿದ ಹೋರಾಟ ಜನರ ಹೃದಯವನ್ನು ಮುಟ್ಟಿ ಜನನಾಯಕರಾದರು. 1920ರ ಆಗಸ್ಟ್ 1ರಲ್ಲಿ ಅನಾರೋಗ್ಯದ ಪರಿಣಾಮವಾಗಿ ಮರಣ ಹೊಂದಿದರು. ಗಾಂಧೀಜಿಯವರು Young India ಎಂಬ ಪತ್ರಿಕೆಯಲ್ಲಿ "ಲೋಕಮಾನ್ಯ ಬಾಲಗಂಗಾಧರ ತಿಲಕರು ಇನ್ನಿಲ್ಲ, ಅವರು ಮೃತರಾದರೆಂದು ನಂಬುವುದೇ ಕಷ್ಟವಾಗಿದೆ" ಎಂದು ತಿಳಿಸಿದರು. ಮಹಾರಾಷ್ಟ್ರದ ಕೇಸರಿ ಎಂದು ಪ್ರಸಿದ್ಧರಾದ ತಿಲಕರು ತಮ್ಮ ಸಹಜ ಶೈಲಿಯಿಂದಲೇ ಜನನಾಯಕರಾಗಿ ಜನರ ಹೃದಯದಲ್ಲಿ ಶಾಶ್ವತ ಸ್ಥಾನಗಳಿಸಿದವರು. ಇವರು ತಂದ ಗಣೇಶ ಉತ್ಸವ, ಶಿವಾಜಿ ಉತ್ಸವಗಳು ಇಂದಿಗೂ ಪ್ರಚಲಿತದಲ್ಲಿದ್ದು ಜನರ ಐಕ್ಯತೆಗೆ ಸಾಕ್ಷಿಯಾಗಿದೆ. ಇವರ ನಂತರ ಕಾಂಗ್ರೆಸ್ಸಿನ ನಾಯಕರಾದ ಗಾಂಧೀಜಿಯವರ ನೇತೃತ್ವದಲ್ಲಿ ಶಾಂತಿ, ಅಹಿಂಸಾ ಮಾರ್ಗದಲ್ಲಿ ಭಾರತ 1947ರಲ್ಲಿ ಸ್ವತಂತ್ರ ಗಳಿಸಿತು. ಈ ಸ್ವಾತಂತ್ರ ಹೋರಾಟದಲ್ಲಿ ತಿಲಕರ ಕೊಡುಗೆ ಅಮೋಘ, ಅನನ್ಯ. ಇವರು ಮಹಾನ್ ವಿದ್ವಾಂಸರಾಗಿದ್ದು "ಗೀತಾರಹಸ್ಯ", "ಓರಿಯನ್(ORION)", "ದ ಆರ್ಕ್ಟಿಕ್ ಹೋಂ ಆಫ್ ದ ಆರ್ಯನ್ಸ್" ಎಂಬ ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಬಸವರಾಜು, ಹೆಚ್.ಎಂ. *ಭಾರತದ ಸ್ವಾತಂತ್ರ್ಯ ಚಳುವಳಿಯ ಸಂಕ್ಷಿಪ್ತ ಚರಿತ್ರೆ*
- ಬಿಪಿನ್‌ಚಂದ್ರ & ಇತರರು. *ಭಾರತದ ಸ್ವಾತಂತ್ರ್ಯ ಹೋರಾಟ.* (ಅನು, ಆರ್.ಎಲ್. ಅನಂತರಾಮಯ್ಯ)
- ದಿವಾಕರ, *ಭಾರತದ ರಾಷ್ಟ್ರೀಯ ಚಳುವಳಿ.*
- ಲೋಕಪ್ಪಗೌಡ, ಸಿ.ಎನ್. *ಭಾರತದ ಸ್ವಾತಂತ್ರ್ಯ ಚಳುವಳಿ.*
- ನರೇಂದ್ರ ಪ್ರಸಾದ, ಎಸ್., ಬಿ. ಪರಮೇಶ್ವರ ಮತ್ತು ಎಸ್. ಮಹದೇವಸ್ವಾಮಿ. *ಭಾರತದ ಸ್ವಾತಂತ್ರ್ಯ ಚಳುವಳಿ*
- ಪಾಲಾಕ್ಷ. *ಭಾರತದ ಸ್ವಾತಂತ್ರ್ಯ ಚಳುವಳಿ*
- ಪ್ರಾಣೇಶ್ ರಾವ್, ಬಿ.ಆರ್. *ಭಾರತದ ಸ್ವಾತಂತ್ರ್ಯ ಹೋರಾಟದ ಮೇರು ವ್ಯಕ್ತಿಗಳು*
- ಸದಾಶಿವ, ಕೆ. *ಭಾರತದ ಸ್ವಾತಂತ್ರ್ಯ ಹೋರಾಟ*
- ಶಂಕರನಾರಾಯಣರಾವ್, ಎಂ.ಬಿ. *ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು.*
- ಸೋಮಲಿಂಗ ಅಪ್ಪಣ್ಣ ಮಳಗಲಿ ಮತ್ತು ಅಚ್ಯುತ ರಾಮಚಂದ್ರ ವಡವಿ. *ಸಚಿತ್ರ ಭಾರತ–ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಮತ್ತು ಗಾಂಧೀಜಿ*